ನೆಲಮಂಗಲ ಮುನ್ಸೀಫ್ ಕೋರ್ಟಿನ ಬಗ್ಗೆ.

1531. ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಟೌನ್‌ನಲ್ಲಿರುವ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಒಂದು ಸಣ್ಣ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ತನ್ನದೇ ಆದ ಸ್ವಂತ ಕಟ್ಟಡದ ನಿರ್ಮಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ;

ಇ) ಕಕ್ಷಿದಾರರ ಹಾಗೂ ನ್ಯಾಯಾಲಯದ ಅಧಿಕಾರಿಗಳ ಹಿತದೃಷ್ಟಿಯಿಂದ ಕಟ್ಟಡ ನಿರ್ಮಿಸಲು ಸರ್ಕಾರ ಕಾಲ ಗೊತ್ತುಪಡಿಸುವುದೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೌದು.

ಆ) ಸ್ವಂತ ಕಟ್ಟಡ ಹೊಂದಲು ಸರ್ಕಾರವು ನೆಲಮಂಗಲ ಸರ್ವೆ ನಂ. 214 ರಿಂದ 215:5 ರಲ್ಲಿರುವ 5 ಎಕರೆ 10 ಗುಂಟೆ ಪ್ರದೇಶವನ್ನು ಭೂ ಸ್ವಾಧೀನಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಕಟ್ಟಡದ ಕಾರ್ಯವನ್ನು ದೊರೆಯುವ ಸಂಪನ್ಮೂಲಗಳನ್ನು ಆಧರಿಸಿ, ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ನೆಲಮಂಗಲ ಮತಕ್ಷೇತ್ರಕ್ಕೆ ವಿದ್ಯುತ್‌ನಿಂದಾಗುವ ತೊಂದರೆ ಬಗ್ಗೆ.

1532. ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಕಡಿಮೆ ವಿದ್ಯುತ್ ವೋಲ್ಟೇಜ್‌ನಿಂದಾಗಿ ರೈತರಿಗೆ, ಕಾರ್ಮಿಕರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸರ್ಕಾರದ ಈ ಕ್ಷೇತ್ರದ ಜನರ ಹಿತದೃಷ್ಟಿಯಿಂದ ಹಾಗೂ ಈಗೀಗ ಹೆಚ್ಚಿನ ಕೈಗಾರಿಕೆಗಳು ಪ್ರಾರಂಭವಾಗುತ್ತಿರುವುದರಿಂದ 25 ಮೆಗವಾಟ್ಸ್ ಟ್ರಾನ್ಸ್‌ಫಾರ್ಮರ್‌ನ್ನು ಒದಗಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಬಂದಿದೆ.

ಆ) ನೆಲಮಂಗಲದಲ್ಲಿರುವ ಉಪ ವಿದ್ಯುತ್ ಕೇಂದ್ರದಲ್ಲಿ ಹೆಚ್ಚುವರಿ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸುವ ಅವಶ್ಯಕತೆ ಸದ್ಯಕ್ಕಿಲ್ಲ. ದಾಬಸ್‌ಪೇಟೆಯಲ್ಲಿ

ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಹೊಸದಾಗಿ ನಿರ್ಮಾಣ ಮಾಡಲು ಉದ್ದೇಶಿಸಿದೆ. ಈ ಉಪ ವಿದ್ಯುತ್ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ನೆಲಮಂಗಲ ಉಪ ವಿದ್ಯುತ್ ಕೇಂದ್ರದ ಲೋಡ್ ಕಡಿಮೆಯಾಗುವುದು. ವೋಲ್ಟೇಜ್ ಮಟ್ಟದ ಸುಧಾರಣೆಗಾಗಿ ನೆಲಮಂಗಲ ತಾಲ್ಲೂಕಿನಲ್ಲಿ ವೋಲ್ಟೇಜ್ ರೆಗ್ಯುಲೇಟರನ್ನು ಹಾಕಿದೆ. ಮತ್ತು ಕನಸವಾಡಿ. ಟಿ. ಬೇಗೂರು ಫೀಡರುಗಳನ್ನು ಬೇರ್ಪಡಿಸಿ. ಹೊರೆಯನ್ನು ಕಡಿಮೆಗೊಳಿಸಲಾಗಿದೆ.

ಬೆಂಗಳೂರು ನಗರದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಹಾಗೂ ಅನುದಾನಿತ ಬಿ.ಎಡ್ ಕಾಲೇಜುಗಳ ಬಗ್ಗೆ.

1573. ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಹಾಗೂ ಅನುದಾನಿತ ಮತ್ತು ಅನುದಾನ ರಹಿತ ಬಿ.ಎಡ್. ಕಾಲೇಜುಗಳ ಒಟ್ಟು ಸಂಖ್ಯೆ :

ಆ) ಆ ಬಿ.ಎಡ್. ಕಾಲೇಜುಗಳ ಹೆಸರುಗಳು :

ಇ) ಪ್ರತಿಯೊಂದು ಕಾಲೇಜಿನಲ್ಲಿಯೂ ಲಭ್ಯವಿರುವ ಸೀಟುಗಳ ಸಂಖ್ಯೆ :

ಈ) ಬೆಂಗಳೂರು ನಗರದಲ್ಲಿರುವ ಎಲ್ಲಾ ಅನುದಾನಿತ ಬಿ.ಎಡ್. ಕಾಲೇಜುಗಳ ಸೀಟುಗಳನ್ನು ಸರ್ಕಾರ ಒಟ್ಟುಗೂಡಿಸಿ ಕೇಂದ್ರೀಕೃತ ಪದ್ಧತಿಯಲ್ಲಿ ಪ್ರವೇಶ ನೀಡುವುದನ್ನು ಅಳವಡಿಸುವ ಪ್ರಸ್ತಾಪನೆಯೇನಾದರೂ ಸರ್ಕಾರದ ಮುಂದೆ ಇದಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಸರ್ಕಾರಿ — ಇಲ್ಲ.

ಖಾಸಗಿ :	ಅನುದಾನಿತ	04
	ಅನುದಾನ ರಹಿತ	07
	ಒಟ್ಟು	11

ಸರ್ಕಾರಿ — ಇಲ್ಲ

ಆ) **ಅನುದಾನಿತ ಖಾಸಗಿ ಕಾಲೇಜುಗಳು**

1) ರಾಷ್ಟ್ರೀಯ ವಿದ್ಯಾಲಯ ಕಾಲೇಜು. ಬೆಂಗಳೂರು.

2) ಎಂ.ಇ.ಎಸ್. ಶಿಕ್ಷಣ ಕಾಲೇಜು. ಬೆಂಗಳೂರು.

3) ವಿಜಯ ಶಿಕ್ಷಣ ಕಾಲೇಜು. ಬೆಂಗಳೂರು.

4) ಬಿ.ಇ.ಎಸ್. ಶಿಕ್ಷಣ ಕಾಲೇಜು. ಬೆಂಗಳೂರು.